ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ: 76/2024**

ಪ್ರ.ವ.ಬೋ.ತಾಃ 22-01-2026

ಚಾಸಾಃ 4 ಪ್ರಾಸಾಃ 4

| | |
|---|---|
| ಸಾಕ್ಷಿಯ ಹೆಸರು | ಮುದ್ದಮ್ಮ |
| ತಂದೆ/ಗಂಡನ ಹೆಸರು | ಜಯಪ್ಪ |
| ವಯಸ್ಸು | 48 ವರ್ಷ |
| ವೃತ್ತಿ | ಕೂಲಿ ಕೆಲಸ |
| ವಾಸ | ಪೋಸನಹಳ್ಳಿ, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ಆರೋಪಿತರು ಗೊತ್ತು. ಚಾಸಾ.1 ನನ್ನ ತಮ್ಮ, ಚಾಸಾ.2 ನನ್ನ ಅಣ್ಣ, ಚಾಸಾ.3 ನನ್ನ ಅಕ್ಕನ ಮಗಳು. ಕಳೆದ 1 ವರ್ಷದ ಹಿಂದೆ ಹುಣಸವಾಡಿ ಗ್ರಾಮದ ನನ್ನ ತಂದೆಗೆ ಸೇರಿದ ಜಮೀನನ್ನು 1 ನೇ ಆರೋಪಿ ನಮಗೆ ಗೊತ್ತಿಲ್ಲದ ಹಾಗೆ ತನ್ನ ಹೆಸರಿಗೆ ಖಾತಾ ಬದಾಲವಣೆ ಮಾಡಿಸಿಕೊಂಡಿದ್ದು, ಈ ಬಗ್ಗೆ ನಮಗೆ ಜಮೀನನ್ನು ಭಾಗ ಕೊಡುವಂತೆ ಕೇಳಲಾಗಿ, 1 ನೇ ಆರೋಪಿ ನಿಮಗೆ ಯಾವುದೇ ಭಾಗ ಕೊಡುವುದಿಲ್ಲ ಎಂದು ತಿಳಿಸಿದರು. ಈ ಬಗ್ಗೆ ಚಾಸಾ.2 ರವರು ಕೇಳಲಾಗಿ 2 ಮತ್ತು 3 ನೇ ಆರೋಪಿತರು ಚಾಸಾ.2 ರವರಿಗೆ ಚೆಕ್ಕೆಯಿಂದ ಹಲ್ಲೆ ಮಾಡಿದರು. 5 ನೇ ಆರೋಪಿ ಚಾಸಾ.2 ರವರಿಗೆ ಕುಡುಗೋಲಿನಿಂದ ಕೈಗೆ ಹಲ್ಲೆ ಮಾಡಿದರು. ಇದರಿಂದ ಚಾಸಾ.2 ರವರ ಕೈಗೆ ರಕ್ತಗಾಯವಾಗಿ, ಕೆಳಗಡೆ ಬಿದ್ದರು. ಆನಂತರ

ಚಾಸಾ.2 ರವರನ್ನು ಮಧುಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದೆವು. 4 ನೇ ಆರೋಪಿಯೂ ಸಹ ನಮಗೆ ಹೊಡೆಯಲು ಬಂದರು. ಆರೋಪಿತರೆಲ್ಲರೂ ಸಹ ಚಾಸಾ.3 ರವರಿಗೂ ಸಹ ಹಲ್ಲೆ ಮಾಡಿದರು. ಈ ಬಗ್ಗೆ ಚಾಸಾ.1 ರವರು ದೂರು ನೀಡಿರುತ್ತಾರೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಆ ದಿನ ಆರೋಪಿತರು ಹಲ್ಲೆಗೆ ಬಳಸಿದ ಒಂದು ಚೆಕ್ಕೆ, ಒಂದು ದೊಣ್ಣೆ ಮತ್ತು ಒಂದು ಮಚ್ಚನ್ನು ನೋಡಿದರೆ ಗುರುತಿಸುತ್ತೇನೆ. ಒಂದು ಚೆಕ್ಕೆಯನ್ನು ಮು.ಮಾ.01 ಎಂದು, ಒಂದು ದೊಣ್ಣೆಯನ್ನು ಮು.ಮಾ.02 ಎಂದು ಮತ್ತು ಒಂದು ಮಚ್ಚನ್ನು ಮು.ಮಾ.03 ಎಂದು ಈಗಾಗಲೇ ಗುರುತಿಸಲಾಗಿದೆ.

ಆನಂತರ ಚಾಸಾ.2 ರವರನ್ನು ಹೆಚ್ಚಿನ ಚಿಕಿತ್ಸೆಗಾಗಿ ತುಮಕೂರಿನ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಈಗ ತೋರುತ್ತಿರುವ ದಂಡ ಪ್ರಕ್ರಿಯಾ ಸಂಹಿತೆ ಕಲಂ 164 ರಡಿಯಲ್ಲಿ ನೀಡಲಾದ ಹೇಳಿಕೆಯಲ್ಲಿನ ಸಹಿ ನನ್ನದಾಗಿರುತ್ತದೆ. ಅದನ್ನು ನಿಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸಸಅ ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ– ಮಾನ್ಯ ಸ.ಸ.ಅ. ರವರಿಂದಃ–**

ಹುಣಸವಾಡಿ ಗ್ರಾಮದ ಸರ್ವೆ ನಂಬರ್ 86/5 ರಲ್ಲಿ ಎರಡು ಎಕರೆ 24 ಗುಂಟೆ ಜಮೀನು ನನ್ನ ತಂದೆಯ ಹೆಸರಿನಲ್ಲಿತ್ತು ಎಂದರೆ ಸರಿ. ಆ ಜಮೀನನ್ನು ಆರೋಪಿತರು

ರೂ.36,00,000/-ಗಳಿಗೆ ಮಾರಾಟ ಮಾಡಿದ್ದು, ಆ ಹಣವನ್ನು ಕೊಡುವಂತೆ ಆರೋಪಿತರನ್ನು ಕೇಳಲು ದಿಃ 30.04.2024 ರಂದು ಮಧ್ಯಾಹ್ನ 2.30 ಗಂಟೆ ಸಮಯಕ್ಕೆ ಹೋಗಿದ್ದೆನು ಎಂದರೆ ಸರಿ. ಆಗ 1 ನೇ ಆರೋಪಿ ಚಾಸಾ.2 ರವರಿಗೆ ಚೆಕ್ಕೆಯಿಂದ ಹಲ್ಲೆ ಮಾಡಿದರು ಎಂದರೆ ಸರಿ. 2 ನೇ ಆರೋಪಿ ಚಾಸಾ.2 ರವರಿಗೆ ಮಚ್ಚಿನಿಂದ ಎಡಗೈಗೆ ಹೊಡೆದರು ಎಂದರೆ ಸರಿ. 5 ನೇ ಆರೋಪಿ ಚಾಸಾ.2 ರವರಿಗೆ ದೊಣ್ಣೆಯಿಂದ ಮೈಕೈಗೆ ಹೊಡೆದು ಹಲ್ಲೆ ಮಾಡಿದರು ಎಂದರೆ ಸರಿ. ಗಲಾಟೆ ಬಿಡಿಸಲು ಬಂದ ಚಾಸಾ.1 ರವರಿಗೆ 3 ನೇ ಆರೋಪಿ ಕೈಯಿಂದ ಮೈಕೈಗೆ ಹೊಡೆದು ನೋವುಂಟು ಮಾಡಿದರು ಎಂದರೆ ಸರಿ. ಗಲಾಟೆ ಬಿಡಿಸಲು ಬಂದ ನನಗೆ 4 ನೇ ಆರೋಪಿ ಕೈಗಳಿಂದ ಹಲ್ಲೆ ಮಾಡಿದರು ಎಂದರ ಸರಿ. ಅಲ್ಲದೇ 1 ಮತ್ತು 2 ನೇ ಆರೋಪಿತರು ಚಾಸಾ.3 ರವರಿಗೆ ಕೈಗಳಿಂದ ಮೈಕೈಗೆ ಹೊಡೆದು ನೋವುಂಟುಪಡಿಸಿದರು ಎಂದರೆ ಸರಿ. ಈ ಗಲಾಟೆಯನ್ನು ಚಾಸಾ.5 ರಿಂದ 7 ರವರು ಬಿಡಿಸಿದರು ಎಂದರೆ ಸರಿ. ಆರೋಪಿತರು ಈ ಜಮೀನಿನ ವಿಚಾರಕ್ಕೆ ಬಂದರೆ ಕೊಲೆ ಮಾಡುತ್ತೇವೆ ಎಂದು ಜೀವ ಬೆದರಿಕೆ ಹಾಕಿದರು ಎಂದರೆ ಸರಿ.

ಈ ಬಗ್ಗೆ ದಿಃ 11.06.2024 ರಂದು ಸಂಜೆ 4.30 ರಿಂದ 4.45 ಗಂಟೆಯವರೆಗೆ ಮಾನ್ಯ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲುಃ- ಆರೋಪಿತರ ಪರವಾಗಿ ಶ್ರೀ. ಪಿ.ಸಿ.ಕೆ.ಆರ್. ವಕೀಲರಿಂದಃ-**

ನನ್ನ ತಂದೆಯ ಹೆಸರು ರಾಮಯ್ಯ. ನನ್ನ ತಂದೆಯ ಆಸ್ತಿಗಳಲ್ಲಿ ಆರೋಪಿತರು ಮತ್ತು ಚಾಸಾ.2 ರವರ ನಡುವೆ ದಿಃ 29.01.2016 ರಂದು ವಿಭಾಗ ಆಗಿದೆ ಎಂದರೆ ಸರಿಯಲ್ಲ. ಆ ವಿಭಾಗದ ಪ್ರಕಾರ ಸರ್ವೆ ನಂಬರ್ 86/5 ರ ಆಸ್ತಿ 1 ನೇ ಆರೋಪಿಯ

ಹಿಸ್ಸೆಗೆ ಬಂದಿತ್ತು ಎಂದರೆ ಸರಿಯಲ್ಲ. ಅದರಂತೆ ಖಾತಾ ಪಹಣಿಗಳು 1 ನೇ ಆರೋಪಿಯ ಹೆಸರಿಗೆ ಬಂದಿರುತ್ತವೆ ಎಂದರೆ ಸರಿಯಲ್ಲ. ನನ್ನ ತಂದೆಯೂ ಸಹ ನಮ್ಮ ಕುಟುಂಬದ ಆಸ್ತಿಗಳಲ್ಲಿ ಹಿಸ್ಸೆ ಮಾಡಿಕೊಟ್ಟಿರುವುದಿಲ್ಲ. ನಮಗೆ ಆರೋಪಿತರು ಭಾಗ ಕೊಡದೇ ಇರುವ ಬಗ್ಗೆ ಸಿವಿಲ್ ದಾವೆ ಸಲ್ಲಿಸಿರುವುದಿಲ್ಲ. ಆ ಜಮೀನನ್ನು ಮಾರಾಟ ಮಾಡುವ ಸಮಯದಲ್ಲಿ ನಾವುಗಳು ಒಪ್ಪಿಗೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ಆಸ್ತಿಯನ್ನು ನಾನು ಸಹ ಪುನೀತ್ ಎಂಬುವವರಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಪುನೀತ್ ರವರಿಂದ ಹಣ ಪಡೆದು ಆ ಆಸ್ತಿ ಮಾರಾಟ ಮಾಡಲು ಒಪ್ಪಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ.1 ಮತ್ತು 2 ರವರು ನನ್ನ, ನನ್ನ ಅಕ್ಕಂದಿರು ಹಾಗೂ ಆರೋಪಿತರ ವಿರುದ್ಧ ಒಂದು ಸಿವಿಲ್ ದಾವೆ ಸಲ್ಲಿಸಿದ್ದು ಆ ದಾವಾ ವಜಾ ಆಗಿರುತ್ತದೆ ಎಂದರೆ ಸರಿ. ಆ ಗಲಾಟೆಯು ಮಧ್ಯಾಹ್ನ 2.00 ರಿಂದ 3.00 ಗಂಟೆಯವರೆಗೆ ನಡೆಯಿತು. ಆ ಸಮಯದಲ್ಲಿ ಆರೋಪಿತರು ಮತ್ತು ನಾವು ನಾಲ್ಕು ಜನ ಮಾತ್ರ ಇದ್ದೆವು. ಪಂಚಾಯಿತಿದಾರರು ಆ ಸ್ಥಳಕ್ಕೆ ಬರುವುದಕ್ಕೆ ಮೊದಲೇ ಗಲಾಟೆ ಮುಕ್ತಾಯವಾಗಿತ್ತು.

ಕೊಡಿಗೇನಹಳ್ಳಿಯಲ್ಲಿಯೂ ಸಹ ಆಸ್ಪತ್ರೆ ಇದೆ. ನಾವು ಚಾಸಾ.2 ರವರನ್ನು ಮಧುಗಿರಿ ಆಸ್ಪತ್ರೆಗೆ ಮಾತ್ರ ಕರೆದುಕೊಂಡು ಬಂದೆವು . ಚೆಕ್ಕೆಯಿಂದ 1 ನೇ ಆರೋಪಿ, ಮಚ್ಚಿನಿಂದ 5 ನೇ ಆರೋಪಿ ಹಲ್ಲೆ ಮಾಡಿರುತ್ತಾರೆ. ರಕ್ತ ಚಾಸಾ.2 ರವರ ಬಟ್ಟೆಗೂ ಸಹ ಆಗಿತ್ತು. ಟವಲ್‌ಗೂ ಸಹ ರಕ್ತ ಆಗಿದ್ದು, ಅದನ್ನು ಪುರವರ ಕೆರೆಗೆ ಬಿಸಾಡಿರುತ್ತೇವೆ. ಈ ರೀತಿ ಟವಲ್ ಬಿಸಾಕಿರುವ ವಿಚಾರವನ್ನು ಪೊಲೀಸರಿಗೆ ತಿಳಿಸಿರುವುದಿಲ್ಲ. ಸುಮಾರು 1 ಅಡಿ

ಅಗಲಕ್ಕೆ ರಕ್ತದ ಕಲೆಗಳಾಗಿದ್ದವು. ಆ ದಿನ ಯಾವುದೇ ಗಲಾಟೆ ಆಗಿರುವುದಿಲ್ಲ, ಯಾರು ಸಹ ನಮಗೆ ಹಲ್ಲೆ ಮಾಡಿಲ್ಲ, ಈ ಬಗ್ಗೆ ಯಾವುದೇ ಪಂಚಾಯಿತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಚಾಸಾ.2 ರವರನ್ನು ಈರಣ್ಣ ಎಂಬುವವರು ಆಟೋದ ಮೂಲಕ ಮಧುಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಈ ಗಲಾಟೆಯ ವಿಚಾರವನ್ನು ನಾವು ವೈದ್ಯರಿಗೆ ತಿಳಿಸಿರುತ್ತೇವೆ. ನಾವು ಆರೋಪಿತರಿಂದ ಹಣ ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ಬರೆದಿರುವ ವಿಚಾರವನ್ನು ನಾನು ಅವಿದ್ಯಾವಂತೆ ಆದ ಕಾರಣ ನೋಡಿರುವುದಿಲ್ಲ. ಪೊಲೀಸರು ಸಹ ನನಗೆ ಓದಿ ಹೇಳಿರುವುದಿಲ್ಲ. 1 ನೇ ಆರೋಪಿಯೇ ನಮ್ಮ ಮದುವೆಯ ಎಲ್ಲಾ ಖರ್ಚನ್ನು ಭರಿಸಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ